**ಕರ್ನಾಟಕ ಸರ್ಕಾರ**

**ಕೃಷಿ ಮಾರಾಟ ಇಲಾಖೆ**

ಸಂ:ಕೃಮಾಇ/ನಿಯವಿ/ಇತರೆ/330/2012

ಕೃಷಿ ಮಾರಾಟ ನಿರ್ದೇಶಕರ ಕಛೇರಿ,
ನಂ.16, 2ನೇ ರಾಜಭವನ ರಸ್ತೆ,
ಬೆಂಗಳೂರು, ದಿನಾಂಕ:13/10/2017

:: **ಸುತ್ತೋಲೆ** ::

**ವಿಷಯ**:- ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಕುರಿತು.

**ಉಲ್ಲೇಖ**:- 1. ಈ ಕಛೇರಿ ಪತ್ರ ಸಂ:ಕೃಮಾಇ/ನಿಯವಿ/ಇತರೆ/330/12-13, ದಿ:12/03/2014.
2. ಈ ಕಛೇರಿ ಸುತ್ತೋಲೆ ಸಂ:ಕೃಮಾಇ/6014-211/16-17, ದಿ:09/08/2016

- - - - -

ಸಹ ನಿರ್ದೇಶಕರು (ಎಫ್‌ಎಸ್‌ಎಸ್‌ಎ), ಸಾರ್ವಜನಿಕ ಆರೋಗ್ಯ ಸಂಸ್ಥೆ, ಬೆಂಗಳೂರು ಇವರು ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ ಜಾರಿಗೆ ಸಂಬಂಧ ನೀಡಿರುವ ಸ್ಪಷ್ಟೀಕರಣ ಹಾಗೂ ಕೈಗೊಳ್ಳಬೇಕಾದ ಕ್ರಮದ ಮಾಹಿತಿಯನ್ನು ಉಲ್ಲೇಖ(1)ರ ಈ ಕಛೇರಿ ಪತ್ರದಲ್ಲಿ ಎಲ್ಲಾ ಸಮಿತಿಗಳಿಗೆ ಕಳುಹಿಸಿಕೊಡಲಾಗಿದೆ.

ಸಮಿತಿಯ ವ್ಯಾಪ್ತಿಯಲ್ಲಿ ಅಧಿಸೂಚಿತ ಕೃಷಿ ಉತ್ಪನ್ನಗಳಲ್ಲಿ ವ್ಯವಹರಿಸುತ್ತಿರುವ ಪೇಟೆ ಕಾರ್ಯಕರ್ತರು ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆಯನ್ವಯ ಎಫ್‌ಎಸ್‌ಎಸ್‌ಎ ನಲ್ಲಿ ಆನ್‌ಲೈನ್ ಮೂಲಕ ನೋಂದಣಿ/ಪರವಾನಗಿ ಪಡೆಯುವುದು ಕಡ್ಡಾಯವಾಗಿದ್ದು, ಒಂದು ತಿಂಗಳೊಳಗಾಗಿ ಕ್ರಮ ವಹಿಸಲು ವರ್ತಕರಿಗೆ ಸೂಚನೆ ನೀಡಲು ಹಾಗೂ ನೋಂದಣಿ ಮಾಡಬೇಕಾದ ವಿಳಾಸದ ಮಾಹಿತಿ ಹಾಗೂ ಮಾರುಕಟ್ಟೆ ಸಮಿತಿಯು ರೈತರು/ವರ್ತಕರು ಅನುಸರಿಸಬೇಕಾದ ಕ್ರಮಗಳ ಕುರಿತು ಪ್ರಾಂಗಣದಲ್ಲಿ ಪ್ರಮುಖ ಸ್ಥಳಗಳಲ್ಲಿ ದೊಡ್ಡ ಅಕ್ಷರಗಳಲ್ಲಿ ಫಲಕಗಳನ್ನು ಹಾಕುವುದು, ಪ್ರಾಂಗಣದಲ್ಲಿ ಒದಗಿಸಿರುವ ಟಿ.ವಿಗಳಲ್ಲಿ ಡಿಸ್‌ಪ್ಲೇ ಆಗುವಂತೆ ನೋಡಿಕೊಳ್ಳುವುದು, ಕರ ಪತ್ರಗಳನ್ನು ಮುದ್ರಿಸಿ ರೈತರು/ವರ್ತಕರುಗಳಿಗೆ ಮಾಹಿತಿ ಒದಗಿಸುವ ಬಗ್ಗೆ ಕ್ರಮ ವಹಿಸಲು ಸೂಚನೆ ನೀಡಲಾಗಿತ್ತು.

ಪ್ರಸ್ತುತ ಸಮಿತಿಯ ಕಾರ್ಯದರ್ಶಿ, ಜಿಲ್ಲಾ ಉಪ/ಸಹಾಯಕ ನಿರ್ದೇಶಕರುಗಳು ಹಾಗೂ ಕಾನೂನು ಜಾರಿಕೋಶದ ಅಧಿಕಾರಿಗಳು ಆಹಾರ ಕಲಬೆರಕೆ ಕುರಿತು ಪರಿಶೀಲನೆ ನಡೆಸುವುದು ಹಾಗೂ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆ ಪರವಾನಗಿಯನ್ನು ಕಡ್ಡಾಯವಾಗಿ ಪಡೆಯುವಂತೆ ಕ್ರಮ ವಹಿಸಲು ತಿಳಿಸಿ ಈ ಬಗ್ಗೆ ಪ್ರತಿ ತಿಂಗಳು ಕೈಗೊಂಡ ಕ್ರಮದ ವರದಿಯನ್ನು ತಪ್ಪದೇ ಸಲ್ಲಿಸುವುದು, ಸರ್ಕಾರದ ಹಂತದಲ್ಲಿ ಈ ಬಗ್ಗೆ ಪರಿಶೀಲನೆ ನಡೆಸುವುದರಿಂದ ಅನುಷ್ಠಾನವಾಗಿರುವ ಮಾಹಿತಿ ಅಗತ್ಯವಿದ್ದು, ವೈಯುಕ್ತಿಕ ಗಮನ ನೀಡಿ ಪ್ರತಿ ತಿಂಗಳ ಮೊದಲ ವಾರದಲ್ಲಿ ನೀಡಿರುವ ಸೂಚನೆಗಳ ಅನುಷ್ಠಾನವಾಗಿರುವ ಬಗ್ಗೆ ವರದಿಯನ್ನು ಸಲ್ಲಿಸಲು ನಿರ್ದೇಶನ ನೀಡಿದೆ.

13-10-17

(ಎಂ.ಬಿ.ರಾಜೇಶ್ ಗೌಡ)
ನಿರ್ದೇಶಕರು

**ಇವರಿಗೆ:-**

1. ಹೆಚ್ಚುವರಿ ನಿರ್ದೇಶಕರು (ಕಾನೂನು ಜಾರಿಕೋಶ), ಕೃಷಿ ಮಾರಾಟ ಇಲಾಖೆ, ಬೆಂಗಳೂರು.
2. ಜಂಟಿ ನಿರ್ದೇಶಕರು (ಕಾನೂನು ಜಾರಿಕೋಶ), ಕೃಷಿ ಮಾರಾಟ ಇಲಾಖೆ, ದಕ್ಷಿಣ ವಲಯ, ಬೆಂಗಳೂರು, ಉತ್ತರ ವಲಯ, ಹುಬ್ಬಳ್ಳಿ.
3. ರಾಜ್ಯದಲ್ಲಿನ ಎಲ್ಲಾ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಕಾರ್ಯದರ್ಶಿಗಳಿಗೆ.
4. ಜಿಲ್ಲಾ ಉಪ/ಸಹಾಯಕ ನಿರ್ದೇಶಕರುಗಳಿಗೆ. 5.ಕಛೇರಿ ಪ್ರತಿ.

# ನಮೂನೆ

## ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿರುವ ಕುರಿತು ಮಾಹಿತಿ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಹೆಸರು:

| ಸಮಿತಿಯಲ್ಲಿ ಲೈಸೆನ್ಸ್ ಪಡೆದಿರುವ ಪೇಟೆ ಕಾರ್ಯಕರ್ತರ ಸಂಖ್ಯೆ : | ಈಗಾಗಲೇ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆಯನ್ವಯ ನೋಂದಣಿ / ಪರವಾನಗೆ ಪಡೆದಿರುವವರ ಸಂಖ್ಯೆ | ಪ್ರಾಂಗಣದಲ್ಲಿ ರೈತರು/ವರ್ತಕರು ಅನುಸರಿಸಬೇಕಾದ ಕ್ರಮಗಳ ಕುರಿತು ಫಲಕಗಳ ಅಳವಡಿಕೆ, ಪ್ರಾಂಗಣದಲ್ಲಿ ಒದಗಿಸಿರುವ ಟಿ.ವಿ ಡಿಸ್ಪ್ಲೇ ಆಗುತ್ತಿರುವ ಬಗ್ಗೆ, ಕರಪತ್ರಗಳನ್ನು ಮುದ್ರಿಸಿ ರೈತರು, ವರ್ತಕರುಗಳಿಗೆ ಮಾಹಿತಿ ಒದಗಿಸಿರುವ ಕುರಿತು ವಿವರ | ಸಮಿತಿ ಕಾರ್ಯದರ್ಶಿ/ಜಿಲ್ಲಾ ಉಪ/ಸಹಾಯಕ ನಿರ್ದೇಶಕರುಗಳು/ಕಾನೂನು ಜಾರಿಕೋಶದ ಅಧಿಕಾರಿಗಳು ಪ್ರಾಂಗಣಗಳಲ್ಲಿ ಆಹಾರ ಕಲಬೆರಕೆ ಕುರಿತು ಪರಿಶೀಲನೆ ನಡೆಸಿರುವ ಮಾಹಿತಿ | ಇತರ ಪೂರಕ ಮಾಹಿತಿ |
|---|---|---|---|---|
| | | | | |